‘ಚೆನ್ನಾಗಿದ್ದಾರೆ... ಆಲ್ವೆಲ್... ಹವ್ ಅಬೌಟ್ ಯು?’ ಥಕ್ಕನೆ ಅಲ್ಲದಿದ್ದರೂ ಉತ್ತರಿಸುವುದಾಯಿತು.

‘ಅಯಾಮ್ ಗುಡ್, ಸರ್–ಜೀ...’ ಅನ್ನುವಾಗ ನೆಲದ ಡೊಂಕಿಗೆ ಕಾಲೆಡರಿತೇನೋ, ತಕ್ಷಣ ನಡೆ ತಿದ್ದಿಕೊಂಡಳು. ‘ಏನು ಗೊತ್ತಾ, ಹೋದ ವಾರ ಭೂಮಿ ಮ್ಯಾಮ್ ಸಿಕ್ಕಿದ್ದರು... ಒಂದು ಕನ್ಸರ್ಟ್‌ನಲ್ಲಿ. ಕುಡ್‌ನ್ಟ್ ಟಾಕ್ ಮಚ್... ಬರೇ ಹಾಯ್ ಅಂತ ಹೇಳಿದೆ. ಅವರು ನನ್ನ ಮರೆತುಬಿಟ್ಟಿದ್ದರು. ಪುನಃ ಪರಿಚಯಿಸಿಕೊಳ್ಳೋದಾಯಿತು...’

‘ಐಸೀ...’ ಅಂತಂದೆ.

ಭೂಮಿ ಈ ಕುರಿತು ನನಗೆ ಹೇಳಲೇ ಇಲ್ಲವಲ್ಲ? ಅಥವಾ, ಹೇಳಿದ್ದರೂ ನನ್ನದೇ ಹೊಸ ಪ್ರೀತ್ಯವತಾರದ ಗಡಿಬಿಡಿಯಲ್ಲಿ ಮರೆತುಬಿಟ್ಟೆನೆ? ಮನಸ್ಸು ಈ ಕುರಿತು ಮುಂದೆ ಯೋಚಿಸಲಿಲ್ಲ. ಸದ್ಯದ ಗ್ರಾಸವೇ ಬೇರೆಯಿದ್ದಿತು.

‘ಸರ್–ಜೀ... ನನಗೆ ಟೈಮ್ ಕೊಡುತೀರಲ್ಲವಾ? ತುಂಬಾ ಮಾತಾಡೋದಿದೆ...’ ಮತ್ತೆ ಅದೇ ವಿಚಾರಕ್ಕಿಳಿದಳು. ಎಲ್ಲದಕ್ಕೂ ಹ್ಞೂಂಗುಟ್ಟಿಕೊಂಡು ನಡೆದೆ.

ಹೋಟೆಲಿನ ಲಾಬಿ ತಲುಪಿದ್ದೇ, ‘ಓಕೆ, ಕುಣಾಲಿ... ವಿಲ್ ಕ್ಯಾಚ್ ಅಪ್ ಅಗೇನ್...’ ಅನ್ನುತ್ತ ಕೈಕುಲುಕಿದೆ. ‘ಸೀ ಯು, ಸರ್–ಜೀ... ಸೀ ಯೂ ಸೂನ್... ನಾನು ಹೇಳಿದ್ದು ಮರೆಯಬೇಡಿ...’ ಅನ್ನುತ್ತ ಬೀಳ್ಕೊಂಡಳು. ಲಾಬಿಯಿಂದ ಬಲಕ್ಕೆ ಸರಿಯುವ ಕಾರಿಡಾರಿಗೆ ಹೊರಳುವಾಗ, ಸುಮ್ಮನೆ ಹಿಂತಿರುಗಿ ನೋಡಿದೆ. ಕುಣಾಲಿ ನನ್ನತ್ತಲೇ ನೋಡಿಕೊಂಡು ಉಳಿದಿದ್ದಳು. ಮತ್ತೊಮ್ಮೆ ಕೈಬೀಸಿ ಮುಂದೆ ಸರಿದೆ. ಅವಳು ಬಲಗೈಯೆತ್ತಿ ಹೆಬ್ಬೆಟ್ಟು ತೋರಿದ್ದು ಕ್ಷಣದಷ್ಟು ಕಂಡಿತು.

## *(ii)*

ಅಪ್ಪಟ ರೋಮನ್ ಕಂಬಗಳು ಸುತ್ತುವರೆದ ಭವಂತಿಯಲ್ಲಿ ಸುಮಾರು ನೂರು ಹೆಜ್ಜೆ ನಡೆದು, ಅದೇ ಭವಂತಿಯು ಈಜುಗೊಳದ ಬದಿಗೆ ದೊಡ್ಡ ಮಂಟಪದಂತಹ ತೆರಹಿನಲ್ಲಿ ಮುಗಿಯುತ್ತಿರುವಲ್ಲಿ– ಆದ್ರಾ, ಬೆನ್ನಿನವರೆಗೂ ಕವಿದ ಹೆರಳು ಬಿಚ್ಚಿಕೊಂಡು, ನನ್ನನ್ನೇ ಎದುರುನೋಡಿಕೊಂಡು ಕುಳಿತಿದ್ದುದು ತೋರಿಬಂತು. ಕಡುನೀಲಿಯ ಡೆನಿಮಿನ ಮೇಲೆ ತೆಳುಹಳದಿಯ ಅಂಗಿ ತೊಟ್ಟಿದ್ದಳು. ಎಂದಿನಂತೆ ಕಣ್ಣು ಕವಿಯುವ ಕರಿಯ ಗಾಜು. ಚೆನ್ನನಿಸಿದಳು. ಇಷ್ಟದ ಹೆಣ್ಣು ಯಾವೊತ್ತೂ ಅಪ್ಸರೆಯೇ... ಥೇಟು, ದಮಯಂತಿಯು ನಳನಿಗಾಗಿ ಕಾಯುವ ರವಿವರ್ಮನ ಚಿತ್ರದ ಸಮಕಾಲೀನ ಅವತರಣಿಕೆಯಂತೆ ಕಂಡಳು!

‘ಹಾಯ್ ಆದ್ರಾ...’ ಅಂತನ್ನುತ್ತ ಎದುರಾದೆ. ‘ಹೇ ಅಭೀ...’ ಅನ್ನುತ್ತ ದಡಬಡಿಸಿ ಎದ್ದು ಅಪ್ಪಿಕೊಂಡಳು. ಅಪ್ಪುಗೆಯೇನೋ ಚೆನ್ನಿತ್ತು... ಆದರೆ ಸನ್ನಿವೇಶ ಚೆನ್ನಿರಲಿಲ್ಲ. ಸೂಕ್ತವಿರಲಿಲ್ಲ. ಝುಗ್ಗನೆ ಮನಸು ಎಚ್ಚೆತ್ತಿತು. ಮುಜುಗರವಾಯಿತು. ಇಷ್ಟಿದ್ದೂ ಪ್ರೀತ್ಯರ್ಥ ಮುಲಾಜಿದೆಯಲ್ಲ, ನನಗೂ ಅವಳನ್ನು ಬಳಸಿ ಹಿಡಿವುದಾಯಿತು. ಕಟ್ಟೆಚ್ಚರ ತಾಳಿಯೇ ಮೆಲ್ಲಗೆ ಬೆನ್ನು ತಡವಿ ಮೃದುವಾಗಿ ತಟ್ಟಿದೆ. ರೇಶಿಮೆಯಂತಹ ಮುಡಿಯ ಹಿಂದೆ, ಅವಳು ಅಂಗಿಯ ಒಳಗೆ ತೊಟ್ಟಿದ್ದ ಬ್ರೇಸಿಯರ್ಸಿನ ಹುಕ್ಕು ಬೆರಳಿಗೆ ತಾಕಿ ತುಸುವೇ ಅಡಚಣೆಯೆನಿಸಿತು. ಥಕ್ಕನೆ ಕೈ ಹಿಂತೆಗೆದೆ. ಇದೇ ಸಂದರ್ಭವು, ನಾವು ಸದಾ ಪರಸ್ಪರ ಕಂಡುಕೊಳ್ಳುವ ದೆಹಲಿಯಲ್ಲೇನಾದರೂ ಇದ್ದ ಪಕ್ಷಕ್ಕೆ – ಅಚೀಚಿನ ಜಗತ್ತು ನಮ್ಮ ಸುತ್ತಲೇ ಮೈಮರೆಯುತ್ತಿತ್ತು. ಮರೆತು ಹಿಂಜರಿಯುತ್ತಿತ್ತು... ಅನ್ನಿಸಿಬಂತು. ಇಷ್ಟಕ್ಕು, ಏಕಾಂತವೆಂಬುದು ತಂತಾನೇ ಆಗುವಂಥದಲ್ಲ...